ಶ್ರೀ ಪಿ. ಜಿ. ಆರ್. ಸಿಂಧ್ಯಾ :-- ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟಿರತಕ್ಕಂಥ ಎಲ್ಲಾ ವಿಚಾರಗಳ ಬಗ್ಗೆಯು ಪ್ರಶ್ನೆ ಕೇಳಬಹುದು, ಉತ್ತರ ಕೊಡತಕ್ಕಂಥ ಸಾಮರ್ಥ್ಯವಿದ್ದರೆ ಉತ್ತರ ಕೊಡಬಹುದು, ನಮ್ಮ ಹತ್ತಿರ ಉತ್ತರ ಕೊಡುವುದಕ್ಕೆ ಸಾಮರ್ಥ್ಯವಿಲ್ಲದಿದ್ದರೆ ಇಲ್ಲ ಅಂಥ ಹೇಳುತ್ತೇವೆ.

ಶ್ರೀ ಜೆ. ಸಿ. ಮಾಧುಸ್ವಾಮಿ :– ಮಾನ್ಯ ಅಧ್ಯಕ್ಷರೇ, ಸಾಮರ್ಥ್ಯದ ಪ್ರಶ್ನೆಯಲ್ಲ. ಇಂಪ್ಲಿಮೆಂಟೇಷನ್ನಿನ ಪ್ರಶ್ನೆ. ಉತ್ತರ ಕೊಟ್ಟಿದ್ದನ್ನು ನಾಳೆ ಇಂಪ್ಲಿಮೆಂಟ್ ಮಾಡುತ್ತೀರಾ ಎನ್ನುವ ಪ್ರಶ್ನೆ. ಅಲ್ಲಿ ನಾವು ಕೇಳಬೇಕಾಗಿರುವ ಪ್ರಶ್ನೆಯನ್ನು ನಾವು ಇಲ್ಲಿ ಕೇಳುತ್ತಿದ್ದೇವೆ. ದಯವಿಟ್ಟು ಅಲ್ಲಿನ ಚರ್ಚೆ ಇಲ್ಲಿ ಆಗಿ ಬಿಟ್ಟರೆ,

ಶ್ರೀ ಪಿ. ಜಿ. ಆರ್. ಸಿಂಧ್ಯಾ :– ನಾನು ಏನು ಉತ್ತರ ಕೊಡುತ್ತೇನೆ, ನಾನು ಏನು ಇಲ್ಲಿ ಹೇಳುತ್ತೇನೆ ಅದನ್ನು ಮಾಡಿಸುತ್ತೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ :– ನಾಳೆ ಭರವಸೆಗಳ ಸಮಿತಿ ಮುಂದೆ ಬಂದರೆ....

ಶ್ರೀ ಪಿ. ಜಿ. ಆರ್. ಸಿಂಧ್ಯಾ :– ಮಾನ್ಯ ಅಧ್ಯಕ್ಷರೇ, ಅದು ಭರವಸೆಗಳ ಸಮಿತಿ ಮುಂದೆ ಬಂದರೆ ನಾನು ಕೊಟ್ಟಿರತಕ್ಕಂಥ ಉತ್ತರ ರೈಲ್ವೇಸ್‌ಗೆ ಸಂಬಂಧಪಟ್ಟ ಹಾಗೆ ನಾನು ಕೊಟ್ಟಿರುವ ಉತ್ತರವನ್ನು ಭರವಸೆ ಸಮಿತಿಗೆ ಕೊಡಿ.

ಶ್ರೀ ಜೆ. ಸಿ. ಮಾಧುಸ್ವಾಮಿ :– ಹಾಗಾದರೆ ನೀವು ನಿಯಮ ತಿದ್ದುಪಡಿ ಮಾಡಿ.

ಶ್ರೀ ಪಿ. ಜಿ. ಆರ್. ಸಿಂಧ್ಯಾ :– ಅದನ್ನು ಮಾಡಿ. ಈ ಸರ್ಕಾರದಲ್ಲಿ ಈ ಸದನದಲ್ಲಿ ನಾವು ಕುಳಿತುಕೊಂಡು ಮುಂಗಡ ಪತ್ರವನ್ನು ಮಂಜೂರಾತಿ ಮಾಡಿ, ಕೇರೈಡ್ ಮಾಡಿ ಎಲ್ಲಾ ಸಂಸ್ಥೆಗಳಿಗೆ ದುಡ್ಡನ್ನು ಕೊಡಿಸತಕ್ಕಂಥಾದ್ದನ್ನು ಮಾಡಿದ್ದೇವೆ. ಇದರ ಜೊತೆಗೆ ಅಂಕೋಲ ಮತ್ತು ಹುಬ್ಬಳ್ಳಿ ಮಧ್ಯೆ ಇರತಕ್ಕಂಥ ರೈಲ್ವೆ ಅನ್ನು ಆದಷ್ಟು ಬೇಗ ಸರ್ಕಾರದವರು ಕ್ಲಿಯರ್ ಮಾಡಬೇಕೆಂದು ಅರ್ಜಿ ಮಾಡುತ್ತೇವೆ. ಇದಕ್ಕೆ ಎಷ್ಟು ದುಡ್ಡು ಎನ್ನತಕ್ಕಂಥದ್ದನ್ನು ಕೇಳುತ್ತೇವೆ. ಅದನ್ನು ಚರ್ಚೆ ಮಾಡುವುದರಲ್ಲಿ ತಪ್ಪೇನೂ ಇಲ್ಲ. ಪ್ರಶ್ನೋತ್ತರ ವೇಳೆಯಲ್ಲಿ ಪ್ರಶ್ನೆ ಕೇಳುವುದರಲ್ಲಿ ಏನೂ ತಪ್ಪಿಲ್ಲ ಸ್ವಾಮಿ.

ಶ್ರೀ ಜೆ. ಸಿ. ಮಾಧುಸ್ವಾಮಿ :– ಯಾವ ಯಾವುದರ ಮೇಲೆ ಕೇಳಬಾರದು ಅಂತ ನಿಯಮ ಇದೆ. ಇಲ್ಲಾ ನಿಯಮದ ಪ್ರಕಾರ ನಡೆಸಿ; ಇಲ್ಲಾ ನಿಯಮಗಳನ್ನಾದರೂ ತಿದ್ದುಪಡಿ ಮಾಡಿಸಿ, ನಾವೂ ಕೇಳುತ್ತೇವೆ.

ಉಪಾಧ್ಯಕ್ಷರು :– ನೋಡೋಣ.

ಜೋಯಡಾ ತಾಲ್ಲೂಕಿನಲ್ಲಿ ವಿಕಾಸ ಕೇಂದ್ರಗಳನ್ನು ಸ್ಥಾಪಿಸುವ ಕುರಿತು.

523 (5869) : **ಶ್ರೀ ಗಂಗಾಧರ್ ನಾಗೇಶ್ ಭಟ್ (ಕಾರವಾರ)** : ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಿಂದುಳಿದ ತಾಲ್ಲೂಕುಗಳ ಕೈಗಾರಿಕೆಗಳಿಗೆ ಮೂಲಭೂತ ಸೌಕರ್ಯ ಅಭಿವೃದ್ಧಿಪಡಿಸಲು ಸರ್ಕಾರವು 55 ಕೋಟಿ ವೆಚ್ಚದ ವಿಶೇಷ ಪ್ಯಾಕೇಜ್ ಘೋಸಿದೆಯೇ;

ಆ) ನಂಜುಂಡಪ್ಪ ವರದಿಯಲ್ಲಿ ಜೋಯಡಾ ತಾಲ್ಲೂಕನ್ನು ಹಿಂದುಳಿದ ತಾಲ್ಲೂಕು ಎಂದು ಗುರುತಿಸಿದರೂ ಸರ್ಕಾರ ಜೋಯಡಾ ತಾಲ್ಲೂಕನ್ನು ಹಿಂದುಳಿದ ತಾಲ್ಲೂಕು ಎಂದು ಘೋಷಿಸಿದೆಯೇ;

ಇ) ಜೋಯಡಾ ತಾಲ್ಲೂಕಿನಲ್ಲಿ ಕೈಗಾರಿಕೆ ವಿಕಾಸ ಕೇಂದ್ರವನ್ನು ಸ್ಥಾಪಿಸುವ ಅಗತ್ಯತೆಯ ಬಗೆಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಯಾವಾಗ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಡಾ: ಡಿ. ಎಂ. ನಂಜುಂಡಪ್ಪ ರವರ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯು ರಾಜ್ಯದ 39 ತಾಲ್ಲೂಕುಗಳನ್ನು ಅತ್ಯಂತ ಹಿಂದುಳಿದ ತಾಲ್ಲೂಕುಗಳೆಂದು, 40 ತಾಲ್ಲೂಕುಗಳನ್ನು ಅತಿ ಹಿಂದುಳಿದ ತಾಲ್ಲೂಕುಗಳೆಂದು ಹಾಗೂ 35 ತಾಲ್ಲೂಕುಗಳನ್ನು ಹಿಂದುಳಿದ ತಾಲ್ಲೂಕುಗಳೆಂದು ಗುರುತಿಸಿದ್ದು, ಅತ್ಯಂತ ಹಿಂದುಳಿದ 39 ತಾಲ್ಲೂಕುಗಳಲ್ಲಿ ಕೈಗಾರಿಕಾ ಬೆಳವಣಿಗೆಗಾಗಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲು **'ಕೈಗಾರಿಕಾ ವಿಕಾಸ'** ಎಂಬ ಹೊಸ ಯೋಜನೆಯನ್ನು ಸರ್ಕಾರವು ಜಾರಿಗೊಳಿಸಿದ್ದು, 2005–2006ನೇ ಆಯವ್ಯಯದಲ್ಲಿ ಈ ಯೋಜನೆಯ ಅನುಷ್ಠಾನಕ್ಕಾಗಿ ಒಟ್ಟು ರೂ. 25.00 ಕೋಟಿ ಅನುದಾನ ಒದಗಿಸಲಾಗಿದೆ.

ಅ) ಡಾ: ಡಿ. ಎಂ. ನಂಜುಂಡಪ್ಪ ಸಮಿತಿ ವರದಿಯಲ್ಲಿ ಜೋಯಿಡಾ ತಾಲ್ಲೂಕನ್ನು ಅತಿ ಹಿಂದುಳಿದ ತಾಲ್ಲೂಕುಗಳ ಪಟ್ಟಿಯಲ್ಲಿ ಗುರುತಿಸಲಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಜೋಯಿಡಾ ಮತ್ತು ಭಟ್ಕಳ್ ಈ ಎರಡು ತಾಲ್ಲೂಕುಗಳನ್ನು ಅತಿ ಹಿಂದುಳಿದ ತಾಲ್ಲೂಕುಗಳೆಂದು ಗುರುತಿಸಲಾಗಿದೆ.

ಇ) ಬಂದಿದೆ, ಪ್ರಸಕ್ತ ಸಾಲಿನಲ್ಲಿ ಯೋಜನೆ ಅನುಷ್ಠಾನಕ್ಕಾಗಿ ರೂ. 25.00 ಕೋಟಿ ಅನುದಾನವನ್ನು ಸರ್ಕಾರವು ನಿಗದಿಪಡಿಸಿದ್ದು, ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲು ಯೋಜಿಸಲಾಗಿದೆ. ಅತಿ ಹಿಂದುಳಿದ ತಾಲ್ಲೂಕುಗಳಲ್ಲಿ ಈ ಕಾರ್ಯಕ್ರಮದ ಅನುಷ್ಠಾನವನ್ನು ಮುಂದಿನ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗುವುದು. ಜೋಯಿಡಾ ತಾಲ್ಲೂಕನ್ನು ಅತಿ ಹಿಂದುಳಿದ ತಾಲ್ಲೂಕೆಂದು ಗುರುತಿಸಲಾಗಿದ್ದು 2006–07ನೇ ವರ್ಷದಲ್ಲಿ **'ಕೈಗಾರಿಕಾ ವಿಕಾಸ'** ಯೋಜನೆಯನ್ನು ಜೋಯಿಡಾ ತಾಲ್ಲೂಕಿನಲ್ಲಿ ಅನುಷ್ಠಾನಗೊಳಿಸಲಾಗುವುದು.

ಶ್ರೀ ಗಂಗಾಧರ್ ನಾಗೇಶ್ ಭಟ್ :– ಮಾನ್ಯ ಅಧ್ಯಕ್ಷರೇ, ಹಿಂದುಳಿದ ತಾಲ್ಲೂಕುಗಳ ಕೈಗಾರಿಕೆಗಳಿಗೆ ಮೂಲಭೂತ ಸೌಕರ್ಯ ಅಭಿವೃದ್ಧಿ ಪಡಿಸಲು ಸರ್ಕಾರವು 55 ಕೋಟಿ ರೂ. ವೆಚ್ಚದ ವಿಶೇಷ ಪ್ಯಾಕೇಜ್ ಘೋಷಿಸಿದೆಯೇ ಅಂತ ಕೇಳಿದ್ದೇನೆ. ಅದಕ್ಕೆ ಉತ್ತರಿಸಿದ್ದಾರೆ ಜೋಯಡಾ ತಾಲ್ಲೂಕಿನಲ್ಲಿ ಈ ಕಾರ್ಯಕ್ರಮದ ಅನುಷ್ಠಾನವನ್ನು ಮುಂದಿನ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗುವುದು. ಜೋಯಡಾ ತಾಲ್ಲೂಕನ್ನು ಅತಿ ಹಿಂದುಳಿದ ತಾಲ್ಲೂಕು ಎಂದು ಗುರುತಿಸಲಾಗಿದ್ದು, 2006–07ನೇ ವರ್ಷದಲ್ಲಿ ಕೈಗಾರಿಕಾ ವಿಕಾಸ ಯೋಜನೆಯನ್ನು ಜೋಯಡಾ ತಾಲ್ಲೂಕಿನಲ್ಲಿ ಅನುಷ್ಠಾನಗೊಳಿಸಲಾಗುವುದೆಂದು ಉತ್ತರಿಸಿದ್ದಾರೆ. ನಾನು ವಿನಂತಿಸಿಕೊಳ್ಳುವುದೇನೆಂದರೆ ಈ ವರ್ಷದಲ್ಲಿ 7–8 ತಿಂಗಳು ಇನ್ನೂ ಇದೆ. ಅದಕ್ಕಾಗಿ ಈ ವರ್ಷದಲ್ಲಿಯೇ ಏಕೆ ಅದನ್ನು ಪ್ರಾರಂಭಿಸಬಾರದು ಅಂತ ನಾನು ಪ್ರಶ್ನೆ ಕೇಳುತ್ತಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ :– ಮಾನ್ಯ ಅಧ್ಯಕ್ಷರೇ, ನಾವು ಈ ಕೈಗಾರಿಕೆಯನ್ನು ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳನ್ನು ಅತಿ ಸಣ್ಣ ಕೈಗಾರಿಕೆಗಳನ್ನು ಬೆಳೆಸಬೇಕು. ಮತ್ತು ಈ ಆರ್ಟಿಜನ್ಸ್‌ಗೆ ಒಂದು ಪ್ರೋತ್ಸಾಹವನ್ನು ಕೊಡಬೇಕು. ಟೈನಿ ಇಂಡಸ್ಟ್ರೀಸ್‌ಗಳು ಮುಂದೆ ಬರಬೇಕು, ಲೋಕಲ್ ರಿಸೋರ್ಸ್ ಯುಟಿಲೈಜೇಶನ್ ಜಾಸ್ತಿಯಾಗಬೇಕು ಎನ್ನುವ ದೃಷ್ಟಿಯಿಂದಾಗಿ ಈ ನಂಜುಂಡಪ್ಪನವರ ವರದಿ ಆಧಾರದ ಮೇಲೆ ಈ ವರ್ಷ ಅಂದರೆ 2005–06ನೇ ಸಾಲಿನಲ್ಲಿ ಅವರು ಹೇಳಿರತಕ್ಕಂಥ ಅತೀ ಹಿಂದುಳಿದ ತಾಲ್ಲೂಕುಗಳಲ್ಲಿ ಈ ಕೈಗಾರಿಕಾ ವಿಕಾಸ ಯೋಜನೆಯನ್ನು ತೆಗೆದುಕೊಂಡಿದ್ದೇವೆ. 2006–07ನೇ ಸಾಲಿನಲ್ಲಿ ಹಿಂದುಳಿದ ಪಟ್ಟಿಯಲ್ಲಿ ಏನು ಸೇರಿಸದ್ದಾರೆ ಆ ತಾಲ್ಲೂಕುಗಳು ಸುಮಾರು 39 ತಾಲ್ಲೂಕುಗಳು ಹಿಂದುಳಿದ ತಾಲ್ಲೂಕುಗಳು ಅಂತ ಹೇಳಿದ್ದಾರೆ. ಅವುಗಳನ್ನು ತೆಗೆದುಕೊಳ್ಳಬೇಕು ಎನ್ನತಕ್ಕಂಥ ಯೋಜನೆಯನ್ನು ನಾವು ಇಟ್ಟುಕೊಂಡಿದ್ದೇವೆ. ಈ ವರ್ಷ ಆಯವ್ಯಯದಲ್ಲಿ ಈ ಅತೀ ಹಿಂದುಳಿದ ತಾಲ್ಲೂಕುಗಳು 39, ಇವುಗಳಿಗಗೆ ಮೂಲಭೂತ ಸೌಕರ್ಯವನ್ನು ಅಂದರೆ ಲ್ಯಾಂಡ್, ಕರೆಂಟ್, ನೀರು ಇತ್ಯಾದಿಗಳನ್ನು ಕೊಡಲಿಕ್ಕೆ ಸುಮಾರು 25 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದ ಸಂಸ್ಥೆ ನಬಾರ್ಡ್‌ನಿಂದ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಕ್ರಿಯೇಟ್ ಮಾಡಲಿಕ್ಕೆ ಏನು ಒಂದು 600 ಕೋಟಿ ರೂಪಾಯಿಗಳನ್ನು ನಾವು ಈ ವರ್ಷ ಸಾಲ ತೆಗೆದುಕೊಳ್ಳುತ್ತಿದ್ದೇವೆ, ಅದರಲ್ಲಿ ಈ ಕೈಗಾರಿಕಾ ವಿಕಾಸ ಯೋಜನೆಗೆ ಸಣ್ಣ ಕೈಗಾರಿಕಾ ಇಲಾಖೆಗಳಿಗೆ ಸುಮಾರು 25ರಿಂದ 30 ಕೋಟಿ ರೂಪಾಯಿಗಳು ಕೊಡಬೇಕು ಅಂತ ಹೇಳಿ ನಾವು ಕೇಳಿದ್ದೇವೆ. ನಮ್ಮ ಸಚಿವ ಸಂಪುಟದ ಉಪ ಸಮಿತಿ ಅದರಿಂದ ಸಹ ಇದಕ್ಕೆ ಒಂದು 25 ಕೋಟಿ ರೂಪಾಯಿ ಕೊಡಲಿಕ್ಕೆ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಈ ವರ್ಷ ಒಟ್ಟಾರೆ ಈ ಕೈಗಾರಿಕಾ ವಿಕಾಸ ಯೋಜನೆಗೆ ಒಟ್ಟು 39 ತಾಲ್ಲೂಕುಗಳಲ್ಲಿ 50 ಕೋಟಿ ರೂಪಾಯಿಗಳನ್ನು ಕೈಗಾರಿಕೆಯ ಬೆಳವಣಿಗೆಗೆ ಖರ್ಚು ಮಾಡುತ್ತಿದ್ದೇವೆ. ಜೋಯಡಾ ತಾಲ್ಲೂಕಿನ ಬಗ್ಗೆ ತಾವೂ ಸಹ ನನ್ನ ಜೊತೆ ಪ್ರಸ್ತಾಪ ಮಾಡಿದ್ದೀರಿ. ಮಾನ್ಯ ಜಿಲ್ಲಾ ಉಸ್ತುವಾರಿ ಮಂತ್ರಿಗಳಾಗಿರತಕ್ಕಂಥ ಶ್ರೀ ಆರ್. ವಿ. ದೇಶಪಾಂಡೆಯವರೂ ಸಹ ಪ್ರಸ್ತಾಪ ಮಾಡಿದ್ದಾರೆ. ಈಗ ಅದಕ್ಕೆ ಬೇಕಾಗಿರತಕ್ಕಂಥ ಈ 39 ಹಿಂದುಳಿದ ತಾಲ್ಲೂಕುಗಳಾಗಿರತಕ್ಕಂಥಾವು ಏನು ಇವೆ, ಈ ಜೋಯಡಾ ಆಗಿ ಇರತಕ್ಕಂಥ ಈ 39 ತಾಲ್ಲೂಕುಗಳಲ್ಲಿ ಮುಂದಿನ ಏಪ್ರಿಲ್‌ನಿಂದ ಇದನ್ನು ಮಾಡಲಿಕ್ಕೆ ಕಾರ್ಯಕ್ರಮ ಪ್ರಾರಂಭ ಮಾಡುತ್ತೇನೆ ಎಂದು ಹೇಳಿ ಅವರಿಗೆ ಹಣಕಾಸನ್ನು ಈ ವರ್ಷ ಕೊಡಲಿಕ್ಕೆ ಆಗುವುದಿಲ್ಲ. ಮುಂದಿನ ವರ್ಷ ಇದಕ್ಕೆ ಹಣಕಾಸನ್ನು ಬಿಡುಗಡೆ ಮಾಡುತ್ತೇನೆ.

ಶ್ರೀ ಗಂಗಾಧರ್ ನಾಗೇಶ ಭಟ್ :– ಮಾನ್ಯ ಅಧ್ಯಕ್ಷರೇ, ಜೋಯಡಾ ತಾಲ್ಲೂಕಿನ ಬಗ್ಗೆ ನಾನು ಒಂದು ಎರಡು ನಿಮಿಷದಲ್ಲಿ ಹೇಳುತ್ತೇನೆ. ಜೋಯಡಾ ತಾಲ್ಲೂಕು ತೀರಾ ಹಿಂದುಳಿದ ತಾಲ್ಲೂಕು ಎಂದು ಹೇಳಿದರೆ ಏನೂ ತಪ್ಪಾಗಲಿಕ್ಕೆ ಇಲ್ಲ. ದಟ್ಟವಾದ ಅರಣ್ಯಪ್ರದೇಶ ಗುಡ್ಡಗಾಡು ಪ್ರದೇಶ, ಅಲ್ಲಿನ ಜನಸಂಖ್ಯೆ ಸಾಧಾರಣ 55 ಸಾವಿರ. ಅಲ್ಲಿ ಇನ್‌ಫ್ರಾಸ್ಟ್ರಕ್ಚರ್ ಸರಿಯಾಗಿ ಇರುವುದಿಲ್ಲ. ಅದಕ್ಕಾಗಿ ದೊಡ್ಡ ದೊಡ್ಡ ಯೋಜನೆಗಿಂತ ಗುಡಿ ಕೈಗಾರಿಕೆ, ಜೇನು ಹೈನುಗಾರಿಕೆ, ಅರಣ್ಯ ಉತ್ಪನ್ನಗಳು, ಹೆಚ್ಚಿನ ಪ್ರಮಾಣದಲ್ಲಿ ಬೆಳೆಸುವಂತಹ ಕೃಷಿ ಮತ್ತು ತೋಟಗಾರಿಕೆ ಆಧರಿಸುವಂತಹ ಕೈಗಾರಿಕೆಗಳನ್ನು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಆಗಬೇಕು. ಆ ತಾಲ್ಲೂಕಿನ ಸ್ಥಿತಿ ಏನಾಗಿದೆ ಅಂದರೆ ಆ ತಾಲ್ಲೂಕು ಹೆಸರಿಗೆ ಅಷ್ಟೇ ತಾಲ್ಲೂಕು ಆಗಿದೆ. ಆದರೆ ಆ ತಾಲ್ಲೂಕಿನಲ್ಲಿ ಒಂದು ಕೋರ್ಟ್ ಇಲ್ಲ. ಒಂದು ಬಸ್ಸು ಡಿಪೋ ಇಲ್ಲ. ಆದರೆ ಹೆಸರಿಗಷ್ಟೇ ತಾಲ್ಲೂಕು. ಆ ತಾಲ್ಲೂಕಿನಲ್ಲಿ ಅಧಿಕಾರಿ ವರ್ಗದವರು

ಯಾರು ಉಳಿಯುವುದಿಲ್ಲ. ಡ್ಯೂಟಿ ಮಾಡುವುದು ಮತ್ತು ಹುಳಿಯಾಳ ತಾಲ್ಲೂಕಿನಲ್ಲಿ ದಾಂಡೇಲಿಯಲ್ಲಿ ಇರುತ್ತಾರೆ. ಮತ್ತು ಕೆಲವರು ಕಾರವಾರದಲ್ಲಿರುತ್ತಾರೆ. ಡ್ಯೂಟಿ ಮಾಡುವುದು ಮತ್ತು ಹೋಗುವುದು. ಅಲ್ಲಿ ಏನಿದೆ ಅಂತ ಹೇಳಿದರೆ ಅಲ್ಲಿ ಬಹಳಷ್ಟು ಕರೆಂಟ್ ಉತ್ಪಾದನೆಯಾಗುತ್ತದೆ. ಆದರೆ ಅಲ್ಲಿ ವ್ಯವಸ್ಥಿತವಾಗಿ ಅಲ್ಲಿ ವಿದ್ಯುತ್ತ್ನ ಲಾಭ ಸಿಗುತ್ತಿಲ್ಲ. ಆದರೆ ಅಲ್ಲಿನ ಜನರ ಮಾನಸಿಕತೆ ಏನಾಗಿದೆ ಅಂದರೆ ಸಾಕಷ್ಟು ಪತ್ರಿಕೆಗಳಲ್ಲಿ ಕೂಡ ಬರುತ್ತಿದೆ. ಗಡಿ ಪ್ರದೇಶವಾಗಿರುವುದರಿಂದ ಅಲ್ಲಿ ಮೂಲಭೂತ ಸೌಲಭ್ಯಗಳು ಇಲ್ಲ. ಕೆಲಸ ಮಾಡುವ ಕೈಗಳಿಗೆ ಕೆಲಸ ಇಲ್ಲ. ಉದ್ಯೋಗ ಏನೂ ಇಲ್ಲ. ಅದಕ್ಕಾಗಿ ತರುಣರು ಗೋವಾದಲ್ಲಿ ಹೋಗಿ ಕೆಲಸ ಮಾಡುತ್ತಿದ್ದಾರೆ. ಅದಕ್ಕಾಗಿ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಅಲ್ಲಿನ ಜನರ ಮಾನಸಿಕತೆ ಏನಾಗಿದೆ ಅಂದರೆ ಅದನ್ನು ಗೋವಾಗೆ ಸೇರಿಸಬೇಕು ಎಂದು ಬಹಳಷ್ಟು ಪತ್ರಿಕೆಗಳಲ್ಲಿ ಕೂಡ ಬರುತ್ತಿದೆ. ಜೋಯಡಾ ಮತ್ತು ಕಾರವಾರವನ್ನು ಗೋವಾ ರಾಜ್ಯದಲ್ಲಿ ಸೇರಿಸಬೇಕು, ಅಲ್ಲಿಗೆ ಸೇರಿಸಿದರೆ ಅಭಿವೃದ್ಧಿಯಾಗುತ್ತದೆ ಎನ್ನುವ ಒಂದು ಭಾವನೆಯಾಗಿದೆ. ಅದಕ್ಕಾಗಿ ಆ ದಿನಗಳು ಬಹಳ ದೂರವಿಲ್ಲ. ಅಂತ ಹೇಳಿ ನಾನು ವಿನಂತಿಸುತ್ತೇನೆ. ಅದಕ್ಕಾಗಿ ದಯವಿಟ್ಟು ಗಡಿ ಪ್ರದೇಶವಿರುವುದರಿಂದ ಸಾಕಷ್ಟು ಅಭಿವೃದ್ಧಿಯಾಗಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ :– ಮಾನ್ಯ ಅಧ್ಯಕ್ಷರೇ, ಅದು ಯಾವ ದಿನಗಳು ದೂರವಿಲ್ಲ ಎನ್ನುವುದು ನನಗೆ ಸರಿಯಾಗಿ ಅವರು ಉಪಪ್ರಶ್ನೆ ಕೇಳತಕ್ಕಂಥ ಸಂದರ್ಭದಲ್ಲಿ ಅರ್ಥವಾಗಿಲ್ಲ. ಅದನ್ನು ಹೇಳಬಾರದು ಎನ್ನತಕ್ಕಂಥಾದ್ದು ನಾನು ಮಾನ್ಯ ಸದಸ್ಯರಿಗೆ ಈ ಸಂದರ್ಭದಲ್ಲಿ ಹೇಳುತ್ತೇನೆ. ಆ ರೀತಿಯ ಭಾವನೆಗಳು ಇದ್ದರೆ ಅದನ್ನು ಕುಡಿಯಲ್ಲಿಯೇ ಮೊಗಚಿಹಾಕಬೇಕು ಎನ್ನತಕ್ಕಂಥ ಕೆಲಸವನ್ನೂ ಸಹ ನಾವು ಮಾಡಬೇಕಾಗುತ್ತದೆ. ಆದ್ದರಿಂದ ಮಾನ್ಯ ಉಪಾಧ್ಯಕ್ಷರೇ, ನಾನು ಮಾನ್ಯ ಸದಸ್ಯಸರಿಗೆ ಭರವಸೆಯನ್ನು ಕೊಡತಕ್ಕಂಥಾದ್ದು ಈ ವರ್ಷ ಅತೀ ಹಿಂದುಳಿದ ತಾಲ್ಲೂಕುಗಳಿಗೆ ಕೈಗಾರಿಕೆ ವಿಕಾಸ ಯೋಜನೆಯನ್ನು ನಂಜುಂಡಪ್ಪನವರ ವರದಿ ಪ್ರಕಾರ ಏನು ಮಾಡಿದ್ದೇವೆ ಅದು ಜೋಯಡಾ ತಾಲ್ಲೂಕಿಗೆ ಸಾಧ್ಯವಿಲ್ಲ.

ಆದರೆ ತಾವು ಹೇಳಿರತಕ್ಕಂಥ ಯೋಜನೆಗಳೇನಿವೆ, ಕೈಗಾರಿಕಾ ವಿಕಾಸ ಅಲ್ಲದೆ ಬೇರೆ ಬೇರೆ programmes ನಮ್ಮ department ನಲ್ಲಿದೆ. ನಾನು ಖಂಡಿವಾಗಿಯೂ ಸಹಿತ ನಿಮ್ಮನ್ನು ಕರೆಸಿ, ಏನು ಮಾಡಬಹುದು ಎಂಬುದನ್ನು ನೋಡುತ್ತೇನೆ. ಉಳಿದಂತೆ, un-employment problem solve ಮಾಡಲಿಕ್ಕೆ, ಅತಿ ಸಣ್ಣ ಕೈಗಾರಿಕೆಗಳಿಗೆ ಸಾಲ ಒದಗಿಸಲಿಕ್ಕೆ PMRY ಹೆಚ್ಚು ಮಾಡಲಿಕ್ಕೆ ಅಥವಾ ಬೇರೆ ರೀತಿಯಲ್ಲಿ artisans ಗೆ ಅನುಕೂಲ ಮಾಡಿಕೊಡಲಿಕ್ಕೆ ಬೇರೆ ಬೇರೆ ಯೋಜನೆಗಳು ನಮ್ಮ ಇಲಾಖೆಯಲ್ಲಿವೆ. ಅದರಲ್ಲಿ ಹೆಚ್ಚು ಒತ್ತನ್ನು ಕೊಡಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ. I promise you of that.

(ಮುಂದಿನ ಪ್ರಶ್ನೆ ಕೇಳಬೇಕಾದ ಮಾನ್ಯ ಸದಸ್ಯರಾದ ವಿ. ಸುನಿಲ್‌ಕುಮಾರ್‌ರವರು ಸದನದಲ್ಲಿ ಹಾಜರಿರಲಿಲ್ಲ)